ಆಗಷ್ಟೇ ನಾನು ಸಾಹಿತ್ಯ ಕ್ಷೇತ್ರದೊಳಕ್ಕೆ ಕಾಲಿಟ್ಟಿದ್ದೆ. ನನ್ನದೊಂದು ಪುಸ್ತಕ ಪ್ರಕಟವಾಗಿತ್ತು. ಆಕೆ ನನ್ನ ಪುಸ್ತಕವನ್ನೋದಿ ತನ್ನ ಅನಿಸಿಕೆಗಳನ್ನು ತನ್ನ ಮುದ್ದಾದ ಅಕ್ಷರಗಳಲ್ಲಿ ದಾಖಲಿಸಿ ಒಂದು ಸುಂದರವಾದ ಪತ್ರವನ್ನು ಬರೆದಿದ್ದಳು. ಸಹಜವಾಗಿ ಅವಳಿಗೆ ಕೃತಜ್ಞತೆಗಳನ್ನು ಹೇಳುತ್ತಾ ನಾನು ಮರುಪತ್ರ ಬರೆದಿದ್ದೆ. ಅವಳಿಂದ ತಕ್ಷಣ ಮರುಪತ್ರ ಬಂದಿತು. ತಾನು ಪ್ಯಾರಿಸನ್ನು ಹಾದು ಲಕ್ಸೆಂಬರ್ಗ್‌ಗೆ ಹೋಗುವವಳಿದ್ದು, ಅಂದೇ ವಾಪಸ್ಸಾಗುತ್ತಿದ್ದೇನೆ. ಮಧ್ಯಾಹ್ನ 'ಫಯೋಟ್' ರೆಸ್ಟೋರೆಂಟ್‌ನಲ್ಲಿ ಲಂಚ್ ಮಾಡೋಣ. ಭೇಟಿಯಾಗಲು ಸಾಧ್ಯವೇ ಎಂದು ಕೇಳಿದ್ದಳು.

ನನಗೆ ತಿಳಿದಂತೆ, 'ಫಯೋಟ್' ಪ್ಯಾರಿಸಿನ ಉಚ್ಚ ವರ್ಗದ ಜನರು ಎಡತಾಕುತ್ತಿದ್ದ ರೆಸ್ಟೋರೆಂಟ್ ಆಗಿದ್ದು ನನ್ನಂತಹವರು ಅಡ್ಡಾಡುವ ಅಡ್ಡೆಯಾಗಿರಲಿಲ್ಲ. ಕನಸಿನಲ್ಲೂ ನಾನು ಈ ಮೊದಲು ಅಲ್ಲಿಗೆ ಹೋಗಿರಲಿಲ್ಲ! ಆದರೂ, ನಾನು ಆ ವಿಷಯದ ಬಗ್ಗೆ ಹೆಚ್ಚು ಯೋಚಿಸಲು ಹೋಗಲಿಲ್ಲ. ಸಾಹಿತ್ಯ

